# ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧ

**ರಶ್ಮಿತಾ ಎಸ್.***

**DOI: https://doi.org/10.5281/zenodo.22301018**

**ABSTRACT**

ಕನ್ನಡ ರಂಗಭೂಮಿಯ ಮೂಲ ಬೇರು ಮತ್ತು ಪ್ರೇರಣಾ ಶಕ್ತಿಯಾಗಿರುವ ಯಕ್ಷಗಾನವು ಜನಪದ ಮತ್ತು ಶಾಸ್ತ್ರೀಯ ಕಲೆಗಳ ಅಪೂರ್ವ ಸಮ್ಮಿಲನವಾಗಿದೆ. ಯಕ್ಷಗಾನ ಹಾಗೂ ಕನ್ನಡ ರಂಗಭೂಮಿಯ ನಡುವಿನ ಅವಿನಾಭಾವ ಸಂಬಂಧ, ಪರಸ್ಪರ ಪ್ರಭಾವ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪೌರಾಣಿಕ ಕಥಾವಸ್ತು, ವಿಶಿಷ್ಟ ವೇಷಭೂಷಣ ಮತ್ತು ಭಾಗವತಿಕೆಯ ಹಿನ್ನೆಲೆಯುಳ್ಳ ಯಕ್ಷಗಾನವು ರಂಗಭೂಮಿಯ ಅಭಿನಯ ಮತ್ತು ತಂತ್ರಗಳ ಮೇಲೆ ಗಾಢ ಪ್ರಭಾವ ಬೀರಿದೆ. ಅಂತೆಯೇ, ರಂಗಭೂಮಿಯ ಪ್ರಭಾವದಿಂದ ಯಕ್ಷಗಾನದಲ್ಲಿ ಸಾಮಾಜಿಕ ವಿಷಯಗಳ ಅಳವಡಿಕೆ, ಪ್ರದರ್ಶನ ಅವಧಿಯ ಕಡಿತ ಮತ್ತು ಮಹಿಳಾ ಕಲಾವಿದರ ಪ್ರವೇಶದಂತಹ ಸಕಾರಾತ್ಮಕ ಬದಲಾವಣೆಗಳಾಗಿವೆ. ಡಾ. ಶಿವರಾಮ ಕಾರಂತರ ಚಿಂತನೆಗಳ ಆಧಾರದ ಮೇಲೆ, ಕಲೆಗಳು ಜಡವಾಗದೆ ತಮ್ಮ ಮೂಲ ಸಂಪ್ರದಾಯವನ್ನು ಕಾಯ್ದುಕೊಂಡು ಕಾಲಕ್ಕನುಗುಣವಾಗಿ ಆಧುನೀಕರಣಗೊಳ್ಳುವ ಅಗತ್ಯವನ್ನು ಪ್ರತಿಪಾದಿಸಲಾಗಿದೆ. ಇವೆರಡೂ ಕಲೆಗಳು ಗಂಗಾ–ಯಮುನಾ ಸಂಗಮದಂತೆ ಪರಸ್ಪರ ಪೂರಕವಾಗಿ ಬೆಳೆಯುತ್ತಾ, ನಾಡಿನ ಕಲಾ ಪರಂಪರೆಯನ್ನು ಜೀವಂತವಾಗಿರಿಸುವ ಆಶಯವನ್ನು ವ್ಯಕ್ತಪಡಿಸಲಾಗಿದೆ.

**KEYWORDS:** ಯಕ್ಷಗಾನ, ಕನ್ನಡ ರಂಗಭೂಮಿ, ಸಾಂಸ್ಕೃತಿಕ ಪರಂಪರೆ, ಕಲಾ ಸಂಪ್ರದಾಯ, ಭಾಗವತಿಕೆ.

* **ರಶ್ಮಿತಾ ಎಸ್.,** ಸಂಶೋಧನಾರ್ಥಿ, ಶ್ರೀನಿವಾಸ ವಿಶ್ವವಿದ್ಯಾನಿಲಯ, ಮಂಗಳೂರು.

“ಚೆಂಡೆಯ ತಾಳಕ್ಕೆ ತಕ್ಕಂತೆ ನಲಿವ ಪ್ರಸಂಗಗಳು ಯಕ್ಷಗಾನವಾದರೆ ಕಲಾವಿದನ ಅನ್ನಭೂಮಿ ಮತ್ತು ಹವ್ಯಾಸ ಭೂಮಿಯೇ ರಂಗಮಂದಿರವಾಗಿದೆ...”

ಕರ್ನಾಟಕವು ಶ್ರೀಮಂತ ನಾಟ್ಯ ಮತ್ತು ರಂಗಪರಂಪರೆಯನ್ನು ಹೊಂದಿರುವ ನಾಡು. ಇಲ್ಲಿನ ಕಲಾ ಇತಿಹಾಸವನ್ನು ನೋಡಿದರೆ, ಯಕ್ಷಗಾನವೇ ಕನ್ನಡ ರಂಗಭೂಮಿಯ ಬೇರು, ಮೂಲ ಮತ್ತು ಪ್ರೇರಣಾ ಶಕ್ತಿ ಎಂದು ಹೇಳಬಹುದು. ಯಕ್ಷಗಾನವು ಜನಪದ ಮತ್ತು ಶಾಸ್ತ್ರೀಯತೆಯ ಸಮ್ಮಿಲನವಾಗಿದೆ ಎಂದರೆ ತಪ್ಪಾಗಲಾರದು. “ಯಕ್ಷ” ಎಂದರೆ ದೇವತೆ, “ಗಾನ” ಎಂದರೆ ಹಾಡು. ಹಾಗಾಗಿ ಯಕ್ಷಗಾನ ಎಂದರೆ ದೈವಿಕ ಕಥೆಗಳನ್ನು ಹಾಡುವ ಮೂಲಕ ಹೇಳುವ ಕಲೆ. ಇನ್ನೊಂದೆಡೆ 19ನೇ ಶತಮಾನದ ಉತ್ತರಾರ್ಧದಲ್ಲಿ ರೂಪುಗೊಂಡ ಕನ್ನಡ ರಂಗಭೂಮಿಯು ಸಮಾಜಮುಖಿಯಾಗಿ, ಗದ್ಯಪ್ರಧಾನವಾಗಿ ಬೆಳೆಯಿತು. ಈ ಎರಡರ ನಡುವಿನ ಸಂಬಂಧವನ್ನು “ಬೇರು ಮತ್ತು ಚಿಗುರು”, “ತಾಯಿ ಮತ್ತು ಮಗು” ಎಂದೂ ಹೇಳಬಹುದು. ಈ ಪ್ರಬಂಧದಲ್ಲಿ ಯಕ್ಷಗಾನವು ಕನ್ನಡ ರಂಗಭೂಮಿಯ ಮೇಲೆ ಬೀರಿದ ಪ್ರಭಾವ, ಪರಸ್ಪರ ವಿನಿಮಯ, ವ್ಯತ್ಯಾಸ ಮತ್ತು ಇವುಗಳ ಮಹತ್ವವನ್ನು ವಿಸ್ತಾರವಾಗಿ ತಿಳಿಯೋಣ.

ಯಕ್ಷಗಾನವು ಸುಮಾರು ಅದೆಷ್ಟೋ ಶತಮಾನದಿಂದಲೇ ಅಸ್ತಿತ್ವದಲ್ಲಿರುವ ಕಲೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದು ಹೆಚ್ಚು ಬೆಳವಣಿಗೆ ಕಂಡಿತು ಎಂದರೆ ತಪ್ಪಾಗಲಾರದು. ನಾನು ಸಂಶೋಧನಾರ್ಥಿಯಾಗಿ ಇದರ ಬಗ್ಗೆ ಕುತೂಹಲ ಮತ್ತು ಆಸಕ್ತಿಯಿಂದ ಜ್ಞಾನ ತಿಳಿಯಲು ಹೊರಟಾಗ ಮಂಗಳೂರು ಹಳೇಕೋಟೆ ಶ್ರೀ ಮಾರಿಗುಡಿ ಸನ್ನಿಧಾನ ಬೋಳಾರದಲ್ಲಿ ನೆಲೆಯಾಗಿರುವ ಮಾತಂಗಿ ಕಟ್ಟೆಯ ಕುರಿತಾಗಿ ದೇವಸ್ಥಾನದ ಹಿರಿಯರು ಶ್ರೀ ಭುಜಂಗ ಇವರಿಂದ ಅನೇಕಾನೇಕ ಮಾಹಿತಿಗಳನ್ನು ತಿಳಿದೆ. ಈ ತಾಯಿಯ ಸನ್ನಿಧಾನದಲ್ಲಿ ಗೆಜ್ಜೆಪೂಜೆ ಮಾಡಿ ಹೆಜ್ಜೆ ಹಾಕಿದ ಪ್ರತಿಯೊಬ್ಬರೂ ಕೂಡಾ ಇಂದು ವಿಶಿಷ್ಟವಾಗಿ ಮತ್ತು ಉನ್ನತ ಶ್ರೇಣಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಇದು ಒಂದು ಕ್ಷೇತ್ರ ಮಹತ್ವವಾದರೆ ಇನ್ನೊಂದು ಅವಕಾಶವನ್ನು ತಮ್ಮ ಮಡಿಲಿಗೆ ಗಿಟ್ಟಿಸಿಕೊಂಡ ರಂಗಭೂಮಿಯ ಪಾತ್ರವೂ ಹೌದು. ಹೀಗೆ ಆರಂಭವಾದ ನನ್ನ ಪಯಣದ ಚಿತ್ತ ಹರಿದದ್ದು ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧದತ್ತ....

**ಯಕ್ಷಗಾನದ ಸ್ವರೂಪ ಮತ್ತು ಇತಿಹಾಸ:**

ರಂಗಸ್ಥಳದಲ್ಲಿ ಗೆಜ್ಜೆ ಕಟ್ಟಿ ಕುಣಿಯುವಾಗ ಗೆಜ್ಜೆ ಧ್ವನಿ ಮೊಳಗುತ್ತದೆ. ಅದರ ಜೊತೆಗೆ ತಾಳ, ವಾದ್ಯ ಸೇರುತ್ತವೆ. ಆದರೆ ಅವು ಸುಖ, ದುಃಖ ಆನಂದಾದಿ ಭಾವಗಳಿಗೆ ತಕ್ಕಂತೆ ಲಘುವೋ, ಗುರುವೋ, ತೀವ್ರವೋ, ಮೆಲುವೋ ಅನ್ನುವ ಭಾವಕ್ಕೆ ತಕ್ಕ ರೀತಿಯಲ್ಲಿ ಕುಣಿಯುವಾಗ ಅದನ್ನು ಜಡಗೊಳಿಸುವ ಇನ್ನೊಂದು ದೊಡ್ಡ ಅಂಗಭಾಗವೆಂದರೆ ಒಬ್ಬ ಪಾತ್ರಧಾರಿ ಹೊರಬೇಕಾದ ಆಭರಣ, ಅಲಂಕಾರಗಳ ಹೊರೆ. ಎಂದರೆ ಮುಂಡಾಸು, ಕಿರೀಟ, ತೋಳ್ಬಂದಿ, ಬಳೆ, ಎದೆಕಟ್ಟು ಮೊದಲಾದವು.

ಯಾವುದೇ ಸೃಜನಶೀಲ ಕಲೆ ತಟಸ್ಥವಾಗಿ, ಜಡವಾಗಿ ಯಾರ್ಯಾರಿಗೋ ಒಲಿಯದು. ಕಲೆ ಜೀವಂತ ವಸ್ತು. ಪ್ರತಿಯೊಂದು ಕಲೆಯೂ ಹಾಗೆಯೇ. ಅದು ತನ್ನಲ್ಲಿರುವ ಗುಣದೋಷಗಳ ಕಡೆಗೆ ಎಂದೂ ಕುರುಡಾಗದು. ನಾಳಿನ ಸಾಧ್ಯತೆಗಳನ್ನು ಇಣುಕಿ ನೋಡುವುದು ಅದರ ಗುಣ. ಅಂಥ ಲಕ್ಷಣಗಳಿಗೆ, ಅವಶ್ಯಕತೆಗಳಿಗೆ ಯಕ್ಷಗಾನ ರಂಗಭೂಮಿಯೊಂದು ಆಕ್ಷೇಪವೆನಿಸಬಲ್ಲುದೆ?

ಅನಾದಿ ಕಾಲದಲ್ಲಿ ಯಕ್ಷಗಾನ ಎಂಬುದು ಇತ್ತೇ? ಅದೇಕೆ ಹುಟ್ಟಿಕೊಂಡಿತು? ಹಿಂದೆ ಇಲ್ಲದ ಒಂದು ಕಲಾ ಸಂಪ್ರದಾಯವನ್ನು ಮುಂದಿನವರು ಏಕೆ ಸೃಷ್ಟಿಸಿದರು ಎಂಬ ಪ್ರಶ್ನೆ ಬರಬಹುದು. ಜೀವನ ಪ್ರವಾಹ ಜಡವಲ್ಲ; ಅದು ಚಿರನೂತನ. ಆದರೆ ಆ ನಾವೀನ್ಯ ಸಂಬಂಧವನ್ನು ಕಡಿದುಕೊಳ್ಳದೆ ಸಾಗಿದಾಗ, ಅದು ತಲೆಮಾರಿನಿಂದ ತಲೆಮಾರಿಗೆ ಮುಟ್ಟಿ, ತನ್ನ ಕೆಲಸ ಮಾಡಬಲ್ಲದು ಎಂಬುದೇ ಸತ್ಯ.

**ಮುಖ್ಯ ಲಕ್ಷಣಗಳು:**

1. ವಸ್ತು: ಮುಖ್ಯವಾಗಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಇತರ ಪುರಾಣಗಳ ಕಥೆಗಳು. “ಸುಭದ್ರಾ ಕಲ್ಯಾಣ”, “ರಾಮನ ಪಟ್ಟಾಭಿಷೇಕ”, “ಕೀಚಕ ವಧೆ” ಪ್ರಸಿದ್ಧ ಪ್ರಸಂಗಗಳು.
2. ಪ್ರಸ್ತುತಿ ವಿಧಾನ: ಇದು 4 ಅಂಗಗಳನ್ನು ಹೊಂದಿದೆ.
    - ಭಾಗವತಿಕೆ: ಕಥೆ ಹೇಳುವವನು, ಹಾಡುವವನು. ಅವನೇ ನಿರ್ದೇಶಕ.
    - ವಾದ್ಯ: ಚೆಂಡೆ, ಮದ್ದಳೆ, ತಾಳ, ಹಾರ್ಮೋನಿಯಂ.
    - ನೃತ್ಯ (ಅಭಿನಯ): ವೇಷಧಾರಿಗಳ ಸಾತ್ವಿಕ ಅಭಿನಯಗಳು.
    - ಸಂವಾದ: ಪದ್ಯಕ್ಕೆ ಗದ್ಯದ ಮೂಲಕ ವ್ಯಾಖ್ಯಾನ ನೀಡುವುದು.
3. ರಂಗ: ತಾತ್ಕಾಲಿಕ ರಂಗ. ಪ್ರೇಕ್ಷಕರು 4 ಕಡೆಯಿಂದಲೂ ನೋಡಬಹುದು.
4. ಸಮಯ: ರಾತ್ರಿ 9 ರಿಂದ ಬೆಳಗ್ಗೆ 5 ರವರೆಗೆ. ಪ್ರಸ್ತುತ ರಾತ್ರಿ 12 ಗಂಟೆಗೆ ಮುಕ್ತಾಯ ಮಾಡುವುದು ಕಡ್ಡಾಯವಾಗಿದೆ.
5. ಭಾಷೆ: ಕನ್ನಡದ ಹಳಗನ್ನಡ ಮಿಶ್ರಿತ ಪದ್ಯಗಳು ಮತ್ತು ಸಂವಾದದಲ್ಲಿ ಪ್ರಾದೇಶಿಕ ಭಾಷೆ.

**ಶೈಲಿಗಳು:**

ಉಡುಪಿ ಮತ್ತು ಉತ್ತರ ಕರ್ನಾಟಕದಲ್ಲಿ “ಬಡಗುತಿಟ್ಟು” ಎಂದೂ ಮತ್ತು ದಕ್ಷಿಣ ಕನ್ನಡ, ತುಳುನಾಡು ಮತ್ತು ಕಾಸರಗೋಡು ಪ್ರದೇಶಗಳಲ್ಲಿ “ತೆಂಕುತಿಟ್ಟು” ಎಂಬವುಗಳಾಗಿವೆ.

ರಂಗಭೂಮಿ ಎಂದರೆ ಪ್ರೇಕ್ಷಕರ ಮುಂದೆ ಪಾತ್ರಧಾರಿಗಳು ಅಭಿನಯದ

ಮೂಲಕ ಕತೆಯನ್ನು ಪ್ರದರ್ಶಿಸುವ ಒಂದು ವೇದಿಕೆಯಾಗಿದ್ದು ಅದರ ಹಂತಗಳು ಇಂತಿವೆ:

1. ಕಂಪನಿ ನಾಟಕ ಯುಗ: 1870–1950. ಕಾಲದಲ್ಲಿ ಗುಬ್ಬಿ ವೀರಣ್ಣ ನಾಟಕ ಕಂಪನಿ, ಹಿರಣ್ಣಯ್ಯ ಮಿತ್ರ ಮಂಡಳಿ. ಇಲ್ಲಿ ಪೌರಾಣಿಕ, ಐತಿಹಾಸಿಕ ನಾಟಕಗಳು ಪ್ರಧಾನ.
2. ಹವ್ಯಾಸಿ ರಂಗಭೂಮಿ: 1950ರ ನಂತರ. ಬಿ.ವಿ. ಕಾರಂತ, ಗಿರೀಶ್ ಕಾರ್ನಾಡ್, ಪಿ. ಲಂಕೇಶ್. ಇಲ್ಲಿ ಪ್ರಯೋಗಶೀಲತೆ ಮತ್ತು ಸಾಮಾಜಿಕ ಕಳಕಳಿ ಹೆಚ್ಚು ಗಮನಾರ್ಹವಾಗಿದೆ.
3. ವೃತ್ತಿಪರ ರಂಗಭೂಮಿ: ಇಂದು ಬೆಂಗಳೂರು, ಧಾರವಾಡ, ಮೈಸೂರಿನಲ್ಲಿ ಸಕ್ರಿಯವಾದುದನ್ನು ಕಾಣಬಹುದಾಗಿದೆ.

**ಯಕ್ಷಗಾನವು ಕನ್ನಡ ರಂಗಭೂಮಿಯ ಮೇಲೆ ಬೀರಿದ ಪ್ರಭಾವ:**

ಯಕ್ಷಗಾನವಿಲ್ಲದೆ ಕನ್ನಡ ರಂಗಭೂಮಿಯ ಕಲ್ಪನೆಯೇ ಅಸಾಧ್ಯ. ಇದನ್ನು 4 ಹಂತದಲ್ಲಿ ನೋಡಬಹುದು:

1. ಅಭಿನಯ: ನವರಸಗಳನ್ನು ಒಳಗೊಂಡ ಅಭಿನಯವಾಗಿದೆ.
2. ಆಂಗಿಕ: ಕೈ–ಕಾಲು–ಮುಖದ ಚಲನೆಯಾಗಿದೆ.
3. ವಾಚಿಕ: ಧ್ವನಿಯ ಏರಿಳಿತ. ಭಾಗವತನ ಹಾಡುವ ಶೈಲಿಯು ನಾಟಕದ ಹಾಡುಗಳಿಗೆ ಮಾದರಿಯಾಯಿತು.
4. ಆಹಾರ್ಯ: ವೇಷಭೂಷಣ, ಅಲಂಕಾರ ಮತ್ತು ಬಣ್ಣಗಳ ಮಹತ್ವವನ್ನು ಒಳಗೊಂಡಿರುತ್ತದೆ.

ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧವನ್ನು ನೋಡಿದಾಗ ಯಕ್ಷಗಾನದಲ್ಲಿ ಪರದೆ ಎತ್ತುವುದು, ಇಳಿಸುವುದು ಮೂಲಕ ದೃಶ್ಯ ಬದಲಾವಣೆ ಮಾಡುವ ಪದ್ಧತಿಯು ಕಂಪನಿ ನಾಟಕದಲ್ಲಿದ್ದರೆ ಸೂತ್ರಧಾರನ ಪಾತ್ರವು ನೇರವಾಗಿ ಭಾಗವತನಿಂದ ಪ್ರೇರಣೆ ಪಡೆದಿದೆ. ಅವನು ಕಥೆಯನ್ನು ಹೇಳಿ, ದೃಶ್ಯವನ್ನು ಪರಿಚಯಿಸುತ್ತಾನೆ. ಪ್ರೇಕ್ಷಕರೊಂದಿಗೆ ನೇರ ಮಾತುಕತೆ, ಪ್ರಶ್ನೋತ್ತರ – ಇದು ಯಕ್ಷಗಾನದ ಮುಕ್ತ ರಂಗದ ಗುಣವಾದರೆ, ಕನ್ನಡ ರಂಗಭೂಮಿಯು ಯಕ್ಷಗಾನದ ಮೇಲೆ ಬೀರಿದ ಪ್ರಭಾವದ ಹಂತಗಳು ಇಂತಿವೆ:

**ವಿಷಯ ವೈವಿಧ್ಯ:** ಸಾಂಪ್ರದಾಯಿಕವಾಗಿ ಪೌರಾಣಿಕ ಕಥೆಗಳಿಗೆ ಸೀಮಿತವಾಗಿದ್ದ ಯಕ್ಷಗಾನವು, ರಂಗಭೂಮಿಯ ಪ್ರಭಾವದಿಂದ "ಬಸವಣ್ಣ", "ಸ್ವಾತಂತ್ರ್ಯ ಹೋರಾಟ", "ರೈತ ಸಮಸ್ಯೆ"ಯಂತಹ ಸಾಮಾಜಿಕ ವಿಷಯಗಳನ್ನು ತೆಗೆದುಕೊಳ್ಳಲು ಆರಂಭಿಸಿತು.

**ತಾಳಮದ್ದಳೆ:** ಇದು ಸಂಪೂರ್ಣವಾಗಿ ರಂಗಭೂಮಿಯಿಂದ ಪ್ರೇರಿತವಾದ

ಹೊಸ ಪ್ರಕಾರವಿದಾಗಿದ್ದು ಇಲ್ಲಿ ನೃತ್ಯ ಮತ್ತು ವೇಷ ಇಲ್ಲ. ಕೇವಲ ಕುಳಿತು ಭಾಗವತದವರು ಮತ್ತು ಅರ್ಥದಾರಿಗಳು ಮೌಖಿಕವಾಗಿ ವ್ಯಕ್ತಪಡಿಸುವ ಪ್ರಸಂಗವಿದಾಗಿದೆ.

**ಸಮಯದ ಕಡಿತ:** ಈಗ 8 ಗಂಟೆ ಬದಲು 3–4 ಗಂಟೆಯ ಯಕ್ಷಗಾನ ಪ್ರಸಂಗಗಳು ಜನಪ್ರಿಯವಾಗಿವೆ. ಇದು ರಂಗಭೂಮಿಯ ಪ್ರಭಾವವೆಂದರೆ ತಪ್ಪಾಗಲಾರದು.

**ಮಹಿಳಾ ಕಲಾವಿದರು:** ಆಧುನಿಕ ರಂಗಭೂಮಿಯಲ್ಲಿ ಮಹಿಳೆಯರು ಮಾತ್ರವಲ್ಲದೇ ಈಗ ಯಕ್ಷಗಾನದಲ್ಲೂ ಮಹಿಳಾ ಅರ್ಥದಾರಿಗಳು ಇದ್ದಾರೆ ಎಂಬುದು ಹೆಮ್ಮೆಯ ವಿಚಾರವಾಗಿದೆ.

ಸಂಸ್ಕೃತಿಯು ಬರೀ ಪಾಂಡಿತ್ಯವಲ್ಲ ಅದು ವಿವೇಚನೆ ಮತ್ತು ಪರಿಜ್ಞಾನ ಎಂಬ ಡಾ. ಎಸ್. ರಾಧಾಕೃಷ್ಣನ್ ಅವರ ಉಕ್ತಿಯಂತೆ ಎರಡರ ನಡುವಿನ ಪ್ರಮುಖ ವ್ಯತ್ಯಾಸಗಳಿದ್ದರೂ ವಿರೋಧವಿಲ್ಲ. ಎರಡೂ ಪೂರಕವಾಗಿವೆ. ಜಾಗತೀಕರಣದ ಯುಗದಲ್ಲಿ ಎರಡೂ ಕಲೆಗಳು ಸವಾಲು ಎದುರಿಸುತ್ತಿವೆ. ಆದರೆ ಅವುಗಳ ಸಮ್ಮಿಲನವೇ ಪರಿಹಾರ. ಯಾವುದೇ ಕಲಾ ಸಂಪ್ರದಾಯವೆಂದರೆ, ನಮಗಿಂತ ಪೂರ್ವದಲ್ಲಿದ್ದ ಕಲಾವಿದರು ಸೃಷ್ಟಿಸಿ, ಬೆಳೆಸಿಕೊಂಡು ಬಂದ ತಂತ್ರ ವಿಧಾನಗಳಷ್ಟೆ. ಆ ಪೂರ್ವಿಕರು ತಮ್ಮ ಮನಸ್ಸಿನ ಭಾವನೆಗಳನ್ನು ತೋಡಿಕೊಳ್ಳುವುದಕ್ಕೆ ಯಾವ ರೀತಿಯ ತಂತ್ರ ಸಹಜ, ಸುಂದರ ಎಂದು ತಿಳಿದರೋ, ಅವುಗಳನ್ನು ಮುಂದಿನವರು ಕಾಯ್ದುಕೊಂಡು ಅನುಕರಿಸುತ್ತ ಹೋಗುವುದೇ ಸಂಪ್ರದಾಯವಾಗುತ್ತದೆ.

ಈ ಬಗೆಯ ಪರಂಪರಾಗತ ಅನುಕರಣೆ ಯಕ್ಷಗಾನ ರಂಗಸ್ಥಳ ಕಲೆಗೂ ಅನ್ವಯಿಸುತ್ತದೆ. ಅದರಲ್ಲಿ ಅನೇಕ ಸುಂದರ ತಂತ್ರಗಳು ಸೇರಿಕೊಂಡಿವೆ. ಅವನ್ನು ಒದಗಿಸಿ, ಅದರ ಸೌಂದರ್ಯವನ್ನು ಹೆಚ್ಚಿಸಿದವರು ಸಾಕಷ್ಟು ಪ್ರತಿಭಾಶಾಲಿಗಳಾದ ಪ್ರಾಚೀನ ಕಲಾವಿದರು. ಯಕ್ಷಗಾನ ಸಂಪ್ರದಾಯದಲ್ಲಿ ಇಂದಿಗೂ ಉಳಿದುಕೊಂಡಿರುವ ಆ ಮಾಧ್ಯಮದ ಅಂಗಭಾಗಗಳಲ್ಲಿ ನಾವದನ್ನು ಚೆನ್ನಾಗಿ ಗುರುತಿಸಬಹುದು. ಉದಾಹರಣೆಗೆ: ಅದರ ಅತಿ ಸುಂದರ, ಮನೋಹರ ವೇಷಭೂಷಣಗಳ ರೂಪ. ಅವು ಕಲ್ಪನಾ ಜಗತ್ತನ್ನೇ ಭ್ರಮಾಲೋಕವನ್ನೇ ನಮ್ಮ ಕಣ್ಮುಂದೆ ನಿಲ್ಲಿಸಿ ತೋರಿಸುತ್ತವೆ. ಮತ್ತು ಯಕ್ಷಗಾನದ ಹಾಡುಗಾರಿಕೆಯ ಸಂಪ್ರದಾಯವೂ ಆದ ಒಂದು ಅಂಗ. ಅದು ಸಂಗೀತದಷ್ಟೇ ಸಾಹಿತ್ಯದೊಡನೆ ಗೀತನಾಟಕಗಳಿಗೆ ಒದಗುವ ರೀತಿಯಲ್ಲಿ, ನೃತ್ಯಕ್ಕೆ ಒದಗುವ ರೀತಿಯಲ್ಲಿ ಬೆಳೆದು ಬಂದಿದೆ. ನಾಟಕವೊಂದರ ಯಾವುದೇ ಭಾವನೆಗಳನ್ನು, ಸನ್ನಿವೇಶವನ್ನು ಚಿತ್ರಿಸಬಲ್ಲ ಶಕ್ತಿ ಅದಕ್ಕಿದೆ. ಅಂಥ ಒಂದು ಸಂಪ್ರದಾಯ ಆಶು ಸಂವಾದ ಮತ್ತು ಮಾತುಗಾರಿಕೆಯಲ್ಲಿ ಬೆಳೆದಿದೆ.

ಇಷ್ಟೆಲ್ಲ ಸಾಂಪ್ರದಾಯಿಕವಾಗಿ ಬಂದಿದ್ದರೂ ಅವೇ ಸಾಕೇ, ಅವು ಸಂಪೂರ್ಣವೇ, ಎಲ್ಲ ವಿಧದ ನಾಟಕೀಯ ಸನ್ನಿವೇಶಗಳನ್ನು ಅವು ಶಕ್ತಿಯುತವಾಗಿ

ತೋರಿಸಬಲ್ಲವೇ ಎಂಬ ಪ್ರಶ್ನೆಗಳು ಸ್ವತಃ ಉದ್ಭವಿಸುತ್ತವೆ. ಈ ಮಾಧ್ಯಮಗಳ ಸಂಪೂರ್ಣ ಪ್ರಯೋಜನವನ್ನು ನಾವು ಪಡೆದಿದ್ದೇವೆಯೇ? ಅದರ ಪರಂಪರೆಯಲ್ಲಿ ಕುಂದುಕೊರತೆಗಳಿಲ್ಲವೇ? ಇಂಥೆಲ್ಲ ಸೂಕ್ಷ್ಮ ಪ್ರಶ್ನೆಗಳನ್ನು ನಾವು ಎದುರಿಸಲು ಅಸಮರ್ಥರಾದರೆ ನಮ್ಮ ಕಲಾ ಸಂಪ್ರದಾಯ ಜಡಗೊಳ್ಳುತ್ತದೆ ಮಾತ್ರವಲ್ಲ, ನಾವು ಅದರ ಕುಂದುಕೊರತೆಗಳ ಕಡೆಗೆ ಕುರುಡಾಗಿ ಈ ಕಲೆಯ ಬೆಳವಣಿಗೆಯೇ ನಿಲ್ಲುತ್ತದೆ.

ನಾನು ಕನಿಷ್ಠ ನಾಲ್ಕು ದಶಕಗಳಿಂದಲೂ ಯಕ್ಷಗಾನ ರಂಗ ಸಂಪ್ರದಾಯದ ಅಂಗಗಳಾದ ವಿವಿಧ ಮಾಧ್ಯಮಗಳನ್ನು ಈ ದೃಷ್ಟಿಯಿಂದ ಪರಿಶೀಲಿಸುತ್ತ ಬಂದಿದ್ದೇನೆ. ಅದರಲ್ಲಿನ ಕೊರತೆಗಳಿಗೆ ಪರಿಹಾರ ಯೋಚಿಸುತ್ತ ಬಂದಿದ್ದೇನೆ. ಅದಕ್ಕೆ ಕಾರಣಗಳನ್ನು ಕುರಿತು ಚಿಂತಿಸಿದ್ದೇನೆ. ಈ ಸಂಪ್ರದಾಯದಲ್ಲಿ ಮಾತುಗಾರಿಕೆ ಉಳಿದ ಗೀತ, ನೃತ್ಯಾಂಗಗಳನ್ನು ಅಧಿಕರಿಸಿ, ಅವುಗಳ ಬೆಳವಣಿಗೆ ತಟಸ್ಥಗೊಂಡುದುದನ್ನು ಕಾಣುತ್ತೇವೆ. ಉದಾಹರಣೆಗೆ: ಅದರ ಸಂಗೀತ ಭಾಗ ಎಂದಿಟ್ಟುಕೊಳ್ಳುವ. ಪುರಾತನ ಪ್ರಸಂಗಕರ್ತರು ಸುಮಾರು 150ರಷ್ಟು ರಾಗಗಳಲ್ಲಿ, ಏಳು ತಾಳಗಳಲ್ಲಿ ನೂರಾರು ಮಟ್ಟು ಇಲ್ಲವೆ ದಾಟಿಗಳನ್ನು ನಿರ್ಮಿಸಿದ್ದಾರೆ. ಅವು ಪ್ರತಿಪಾದಿಸದ ಭಾವನೆ, ಕಲ್ಪನೆಗಳೇ ಇಲ್ಲ – ಎನ್ನಬಹುದು. ಆದರೆ, ಇಂದು ಬಹುಸಂಖ್ಯೆಯಲ್ಲಿ ಈ ರಾಗಗಳು ಮರೆತೇ ಹೋಗಿವೆ. ಅವುಗಳ ಹೆಸರು ಉಳಿದಿದ್ದರೂ, ಸ್ವರಸಂಚಾರ ನಮಗೆ ತಿಳಿದಿಲ್ಲ. ಸದ್ಯಕ್ಕೆ 60ರಷ್ಟು ರಾಗಗಳನ್ನು ಗುರುತಿಸಿ, ಧ್ವನಿ ಲೇಖಿಸಿ, ಸಂಚಾರ ಲಕ್ಷಣಗಳನ್ನು ತಿಳಿಸುವ ಪ್ರಯತ್ನ ಇದೆ.

ಇವತ್ತು ಒಳ್ಳೆಯ ಭಾಗವತಿಕೆ ಎಂದರೆ – ಒಳ್ಳೆಯ ಶರೀರ, ತಾಳ ನೈಪುಣ್ಯ, ಏರು ದನಿಯಲ್ಲಿ ಹಾಡುವ ಶಕ್ತಿ ಇಷ್ಟೇ ಅನಿಸುತ್ತದೆ. ಹಾಡುಗಳೊಡನೆ ಸಾಹಿತ್ಯ ಸೇರಿದೆ, ಆ ಸಾಹಿತ್ಯದಿಂದಾಗಿ ಹಾಡಿನ ಪ್ರಬಂಧ ಸೃಷ್ಟಿಗೊಂಡಿತು – ಎಂಬ ಪರಿವೆಯೇ ಇಲ್ಲವಾಗಿದೆ. ತಾಳದ ಬಡಿತ, ಚೆಂಡೆಮದ್ದಳೆಗಳ ಅಬ್ಬರ ವಿಪರೀತವಾಗಿ, ಸಾಹಿತ್ಯಾಂಶ ಸಂಪೂರ್ಣವಾಗಿ ಮುಳುಗಿ ಹೋಗುತ್ತದೆ. ನಾಟಕದ ಅಂಗವಾದ ಗೇಯಸಾಹಿತ್ಯ ಮಾತಿನ ಉಚ್ಚಾರದಷ್ಟೇ ಧ್ವನಿ ವೈವಿಧ್ಯವನ್ನು ಹೊತ್ತು ಬರಬೇಕೆಂಬ ಭಾವನೆ ನಮ್ಮಲ್ಲಿ ಹುಟ್ಟಿಯೇ ಇಲ್ಲ. ಇಲ್ಲಿ ಗೀತ ಇರುವುದು ಏಕಮಾತ್ರ ಉದ್ದೇಶದಿಂದ. ಆ ಉದ್ದೇಶ ಭಾವಗಳ ಅಭಿವ್ಯಕ್ತಿ ಮತ್ತು ಸಾಹಿತ್ಯದಲ್ಲಿ ಬರುವ ವಿಚಾರಗಳ ಬಿಂಬನೆ. ತಾಳ ಮತ್ತು ಪಕ್ಕವಾದ್ಯಗಳು ಆನಂದ, ಹಿಗ್ಗು, ರೌದ್ರ, ದುಃಖ, ಭಯ, ಜಿಗುಪ್ಸೆ ಮೊದಲಾದ ರಸಗಳಿಗೆ ಅನುಗುಣವಾಗಿಯೇ ಹೊಮ್ಮಬೇಕು. ಈ ಕೆಲಸ ಮಾಡಲು ಭಾಗವತನು ಸಾಹಿತ್ಯ ಮತ್ತು ಗೀತಗಳ ನೇರ ಸಂಬಂಧವನ್ನು ಗುರುತಿಸಲಾರದೆ ಹೋದರೆ, ಉಚಿತ ರೀತಿಯಲ್ಲಿ ಹಾಡಲಾರ.

ಯಕ್ಷಗಾನ ಕುಣಿತ ದೇಹದ ಸರ್ವಾಂಗೀಣ ಅಭಿವ್ಯಕ್ತಿಯಾಗಿಲ್ಲ. ಅದರಲ್ಲಿ ಲಯ ಇಲ್ಲವೆ ದೇಹದ ತರಂಗಿತೆ, ಪದಗತಿ, ಅಂಗವಿನ್ಯಾಸ, ಹಸ್ತ, ತೋಳುಗಳ ಚಲನೆಗಳು ಸಮ್ಮೇಳದಿಂದ ಸಾಗುವುದಿಲ್ಲ. ಹೇಳುವ ವಿಷಯವನ್ನೆಲ್ಲ ಬರಿ ಮಾತಿನಿಂದಲೇ ಮುಗಿಸುವ ಪ್ರವೃತ್ತಿ ಬೆಳೆದು ಬಂದುದರಿಂದ, ನೃತ್ಯವೆಂಬುದು ಭಾವ

ಪ್ರಕಟಣೆಯ ದೃಷ್ಟಿಯಿಂದ ಏಕತಾನವಾಗಿ ಸರಿಯಿತು. ಅಲ್ಲದೆ, ತನ್ನ ಅರ್ಥವನ್ನು ಕಳೆದುಕೊಳ್ಳುವಂತಾಯಿತು ಮತ್ತು ಶರೀರವನ್ನು ವ್ಯಾಪಿಸುವ ತರಂಗಿತ ಚಲನೆ ಮುಖಮುದ್ರೆಗಳ ಜೊತೆಯಲ್ಲಿ ಪ್ರಕಟಗೊಂಡಾಗ ಮಾತ್ರವೇ ಅದು ಸಂಪೂರ್ಣ ನೃತ್ಯವಾಗಬಲ್ಲದು. ಅಂಥ ವಿಧಾನಗಳ ಸಾಧ್ಯತೆ ಧಾರಾಳವಾಗಿದ್ದರೂ, ಅದನ್ನು ಸೃಷ್ಟಿಸುವ ಇಲ್ಲವೆ ಬೆಳೆಸುವ ಗೊಡವೆಗೆ ನಾವು ಹೋಗಿಲ್ಲ. ಹೀಗೆಂದೊಡನೆ ಹಾಡಿನ ಪ್ರತಿಯೊಂದು ಶಬ್ದವನ್ನು ನಾವು ಮುದ್ರೆ ಇಲ್ಲವೆ ಸಂಕೇತಗಳಿಂದ ಭರತನಾಟ್ಯದಂತೆ ತೋರಿಸಬೇಕೆಂಬ ಭಾವನೆ ಅಲ್ಲ. ನೃತ್ಯ ಭಾಷೆಯ ಕೆಲಸವನ್ನು ಎಂದೂ ಮಾಡಲಾರದು; ಮಾಡಲೂ ಬೇಕಿಲ್ಲ. ಆದರೆ ನಮ್ಮ ಅಭಿನಯದ ಭಾಗ ಮುಖಮುದ್ರೆಗಳಿಂದಲೂ, ನಿತ್ಯ ಜೀವನದಲ್ಲಿ ಬಳಸುವ ಅನೇಕ ಹಾವಗಳಿಂದಲೂ ಮತ್ತಷ್ಟು ಶಕ್ತಿಯುತವೂ, ಅರ್ಥಪೂರ್ಣವೂ ಆಗಬಲ್ಲ ಸಾಧ್ಯತೆ ಬೇಕಷ್ಟಿದೆ.

**ಉಪಸಂಹಾರ:**

ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧವು "ಗಂಗಾ–ಯಮುನಾ" ಸಂಗಮದಂತೆ. ಯಕ್ಷಗಾನವು ಶುದ್ಧ, ಪ್ರಾಚೀನ, ಆಧ್ಯಾತ್ಮಿಕ ಮೂಲ. ಕನ್ನಡ ರಂಗಭೂಮಿಯು ಅಂದಿನಿಂದ ಇಂದಿನ ವರೆಗೆ ಚಿಗುರೇ ಸರಿ. ಮೂಲವಿಲ್ಲದೆ ಚಿಗುರು ಇಲ್ಲ, ಗುರಿಯಿಲ್ಲದೆ ಮರಕ್ಕೆ ಅರ್ಥವಿಲ್ಲ. ರಂಗಭೂಮಿಯು ಜೀವಂತವಾಗಿ ಉಳಿಯಬೇಕಾದರೆ, ಅದು ತನ್ನ ಬೇರಾದ ಯಕ್ಷಗಾನವನ್ನು ಮರೆಯಬಾರದು. ಅದೇ ರೀತಿ ಯಕ್ಷಗಾನವು ಕೂಡ ಕಾಲಕ್ಕೆ ತಕ್ಕಂತೆ ರಂಗಭೂಮಿಯಿಂದ ಕಲಿತು ನವೀನವಾಗಬೇಕು. ಹೀಗೆ "ಸಂಪ್ರದಾಯ ಮತ್ತು ಆಧುನಿಕತೆ"ಯ ಸೇತುವೆಯಾಗಿ ಈ ಎರಡೂ ಕಲೆಗಳು ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಿವೆ. ಬೇರು ಗಟ್ಟಿಯಾದಾಗ ಮಾತ್ರ ಮರ ಎತ್ತರಕ್ಕೆ ಬೆಳೆಯುತ್ತದೆ ಮತ್ತು ಮರ ಎತ್ತರಕ್ಕೆ ಬೆಳೆದಾಗ ಮಾತ್ರ ಬೇರಿಗೆ ಗೌರವ ಬರುತ್ತದೆ.

ಮನುಷ್ಯ ತನ್ನ ಆತ್ಮತೃಪ್ತಿಗಾಗಿ ಹಲವು ಹವ್ಯಾಸಗಳನ್ನು ತನ್ನಲ್ಲಿ ಮೈಗೂಡಿಸಿಕೊಳ್ಳುತ್ತಾನೆ. ಅಂತಹದರಲ್ಲಿ ಯಕ್ಷಗಾನ ಮತ್ತು ರಂಗಕಲೆ ಎಂಬುದು ವೃತ್ತಿ ಮತ್ತು ಹವ್ಯಾಸಿ ಕಲೆಯಾಗಿದೆ. ಈ ದೈವತ್ವ ಕಲೆಯು ದೈವಾನುಗ್ರಹ ಮತ್ತು ಆತ್ಮಸ್ವೀಕಾರದಿಂದ ಬರುವಂತಹದ್ದಾಗಿದೆ. ಇದರ ಬೆಳವಣಿಗೆಯ ಹಾದಿಗಳನ್ನು ಗಮನಿಸುತ್ತಾ ಹೋದಾಗ ಇದು ವ್ಯಾಪಕವಾಗಿ ಎಲ್ಲೆಡೆ ಪಸರಿರುವುದನ್ನು ನಾವು ಕಾಣಬಹುದಾಗಿದೆ. ಅಂದು ಜಂಗಮವಾಣಿ ಅಥವಾ ಯಾವುದೇ ಸಾಮಾಜಿಕ ಜಾಲತಾಣ ಸಂಪರ್ಕ ಇಲ್ಲದೆ ಇದ್ದಂತಹ ಅದೊಂದು ಕಾಲಘಟ್ಟದಲ್ಲಿ ಇದೇ ಯಕ್ಷಗಾನದ ವೀಕ್ಷಣೆಗಾಗಿ ಚಳಿಯನ್ನು ಲೆಕ್ಕಿಸದೆ ಕಾಯುತ್ತಿದ್ದ ಯಕ್ಷಗಾನದ ಅಭಿಮಾನದ ಕಾಲಘಟ್ಟ ಮತ್ತು ರಂಗವೇದಿಕೆಯೂ ಹೌದು.

ತಮ್ಮ ಇಷ್ಟಾರ್ಥ ಸೇವೆ ಮತ್ತು ಕಷ್ಟ ಕಾರ್ಪಣ್ಯಗಳು ಬಂದಾಗ ಮತ್ತು ಅನಾರೋಗ್ಯ ಬಂದಾಗ ಮದ್ದು ಮಾಡುವುದು, ನೂಲು ಕಟ್ಟುವುದು, ದೃಷ್ಟಿ ತೆಗೆಯುವುದು ಮುಂತಾದ ಕ್ರಮಗಳು ಇತ್ತು. ಆದರೆ ಅದರ ಜೊತೆಗೆ ಯಕ್ಷಗಾನ

ಮಾಡಿಸುವುದು ಅಂದರೆ ಆಟ ಆಡಿಸುವ ಕ್ರಮ ಅಂದಿಗು ಇತ್ತು ಕೆಲವೆಡೆ ಇಂದಿಗು ಇದೆ. ಉದಾಹರಣೆಗೆ: ನಾನು ಈ ಮೊದಲೇ ಹೇಳಿದಂತೆ ಮಾರಿಗುಡಿ ದೇವಸ್ಥಾನ ಬೋಳಾರದ ಹಿರಿಯರಾದ ಶ್ರೀ ಭುಜಂಗ ಇವರು ಒಂದು ಘಟನೆಯನ್ನು ನೆನಪಿಸಿ ಹೇಳಿದರು. ಒಮ್ಮೆ ಮೈಯಲ್ಲಿ ಕಜ್ಜಿ ಬಿದ್ದಂತಹ ಕಾಯಿಲೆ ಬಂದಾಗ ಮಾರಿ ಓಡಿಸುವುದು ಎಂಬ ಕ್ರಮದಡಿಯಲ್ಲಿ ಕೆಲವೊಂದು ಧಾರ್ಮಿಕ ವಿಧಿವಿಧಾನಗಳನ್ನು ಮಾಡಿಕೊಂಡು ಬಳಿಕ ನಾನೇ ಮೇಳವನ್ನು ಹುಟ್ಟು ಹಾಕಿದೆ. ಅಂದರೆ ಭಜನೆಯಿಂದ, ಪೂಜೆಯಿಂದ, ಪ್ರಾರ್ಥನೆಯಿಂದ ದೇವರು ಹೇಗೆ ಸಂಪ್ರೀತರಾಗುತ್ತಾರೋ ಹಾಗೆಯೇ ದೇವಸನ್ನಿಧಾನದಲ್ಲಿ ಗೆಜ್ಜೆ ಪೂಜೆಯನ್ನು ಮಾಡಿಸಿ, ಯಕ್ಷಗಾನವನ್ನು ರಂಗಭೂಮಿಯಲ್ಲಿ ಆಡಿಸಿ ಅದರ ಫಲಶ್ರುತಿಯನ್ನು ಕಂಡವರು ನಮ್ಮ ನಿಮ್ಮಲ್ಲಿ ಅದೆಷ್ಟು ಜನಗಳು ಇದ್ದಾರೋ ಅವರೇ ಜೀವಂತ ಸಾಕ್ಷಿಯಾಗಿದ್ದಾರೆ. ಇಂತಹ ಘಟನೆಗಳು ಸ್ಮೃತಿಪಟಲದಲ್ಲಿ ಅಷ್ಟೇ ಇದೆ.

ಯಾಕೆಂದರೆ ಇಂದು ಉಚಿತವಾಗಿ ಆದರೂ ಸ್ವಲ್ಪ ಹೊತ್ತು ವೀಕ್ಷಿಸುವ ಮಟ್ಟದಲ್ಲಿ ಇಂದು ಹೆಚ್ಚಿನವರಿಗೆ ಮನಸಿಲ್ಲ, ಏಕಾಗ್ರತೆ ಇಲ್ಲ, ಆಸಕ್ತಿಯೂ ಇಲ್ಲ. ಅವಶ್ಯಕತೆಯಂತೂ ಇಲ್ಲವೇ ಇಲ್ಲ. ಬೇಕಿದ್ದರೆ ಹೊಸತನವಾಗಿಂದು ಹಾಸ್ಯ ಮತ್ತು ವಿವಿಧ ಭಾಷೆಯ ತರ್ಜುಮೆಯ ಪ್ರಯತ್ನಗಳನ್ನು ನೋಡಿದರೆ ಹೊಸತನವೋ ಅಥವಾ ಅವನತಿಯ ಅಧ್ಯಾಯವೋ ತಿಳಿಯದಾಗಿದೆ. ಅದೇನೇ ಇದ್ದರು ಕೆಲವೊಮ್ಮೆ ಅಪಹಾಸ್ಯದತ್ತ, ವಾದ–ವಿವಾದಗಳತ್ತ ನಲಿದಾಡುತ್ತಿರುವುದು ಮಾತ್ರ ಸರಿಯಲ್ಲ. ಒಂದು ವೇಳೆ ಸಾಂಸ್ಕೃತಿಕ ಎಂಬುದರ ಮಹತ್ವವನ್ನು ನಾವು ಅರಿಯದೆ ಕೇವಲವಾಗಿ ನೋಡಿ, ಕಲೆಯ ಕೊಲೆಗೆ ಪ್ರಯತ್ನಿಸಿದರೆ ನಿಜವಾಗಿಯೂ ಅಜ್ಞಾನಿಗಳೆ ಎಂಬುದು ನನ್ನ ಅಭಿಪ್ರಾಯ.

ಇಂದು ಕುಳಿತಲ್ಲಿಂದನೇ ಪ್ರಪಂಚವನ್ನು ಕೈಯೊಳಗೆ ಹಿಡಿದಿಡುವಷ್ಟು ಬೆಳೆದಿದ್ದೇವೆ ಎಂಬ ಅಹಂಕಾರದಲ್ಲಿ ವೇದ ಮೊದಲೋ ಅಥವಾ ವಿಜ್ಞಾನ ಮೊದಲೋ ಎಂಬ ಉತ್ತರ ಸಿಗದ ಪ್ರಶ್ನೆಯ ಬೆನ್ನತ್ತಿದಂತೆಯೇ ಸರಿ. ಕಾಲನಿಯಮಗಳಿಗನುಗುಣವಾದ ಬದಲಾವಣೆಗಳನ್ನು ಒಪ್ಪುವ ನಾವುಗಳು ಯಾವುದೇ ಮೂಲವನ್ನು ಮಾತ್ರ ಮರೆಯಬಾರದು. ಹಾಗಾಗಿ ಯಕ್ಷಕಲೆಯನ್ನು ವೇದಿಕೆಯಲ್ಲಿ ಮೆರುಗು ಕಾಣಿಸುವ ಅತ್ಯದ್ಭುತ ಕೊಂಡಿಯೇ ರಂಗಭೂಮಿಯಾಗಿದ್ದು ತಾಯಿಯೊಡನೆ ಇರುವ ಮಗುವಿನಂತೆ ಬಾಂಧವ್ಯವನ್ನು ವರ್ಣಿಸಲು ಸಾಧ್ಯವಿಲ್ಲ. ನಾಟ್ಯಶಾಸ್ತ್ರ ರಚನೆಗೂ ಮುನ್ನ ಜನಪದರ ನಡುವೆ ಸಶಕ್ತ ರಂಗಭೂಮಿ ಇತ್ತು. ಅದರ ಮೂಲತತ್ವವನ್ನು ಇಂದಿಗೂ ಉಳಿಸಿಕೊಂಡ ಹೆಮ್ಮೆ ಎಂದರೆ ಅದು ಯಕ್ಷಗಾನವಾಗಿದೆ. ಹಾಗಾಗಿ ಯಾವುದೇ ಕಲೆಗಳಾಗಲಿ, ಸಂಪ್ರದಾಯವಾಗಲಿ ಅಥವಾ ಪರಂಪರೆಯಾಗಲಿ ಒಮ್ಮೆ ಅಳಿದರೆ ಅಥವಾ ನಮ್ಮ ಕೈ ತಪ್ಪಿ ಹೋದರೆ ಮತ್ತೆ ಸಿಗದು ಮತ್ತು ಪಡೆಯಲಾಗದು ಎಂಬ ವಾಕ್ ಉಕ್ತಿಯಂತೆ....

**ಯುಗ ಯುಗಕೂ ಮಾರ್ದನಿಸಲಿ ಈ ಗಾನ**

**ಅದುವೇ ಹೆಮ್ಮೆಯ ಯಕ್ಷಗಾನ**
**ಎಂದೆನಿತು ಜೊತೆಗಿರಲು ರಂಗಭೂಮಿ**
**ನಾನು ನೀನು ಆಗೋಣವಿದರ ಪ್ರೇಮಿ....**

ಎನ್ನುತ್ತಾ ವಿಷಯವನ್ನು ಅರಿಯುವುದರ ಜೊತೆ ಜೊತೆಗೆ ಅಳಿವಿನತ್ತ ವಾಲಿಸದೇ ಉಳಿವಿನತ್ತ ಶ್ರಮಿಸುವುದೇ ನಮ್ಮೆಲ್ಲರ ಹೊಣೆ ಮಾತ್ರವಲ್ಲ ನಮ್ಮ ಕರ್ತವ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧವು ಮೂಲ – ಆದಿಯಿಂದ ಇಂದಿಗೂ ಎಂದಿಗೂ ಚಿರ ಮತ್ತು ಅಜರಾಮರವಾಗಲಿ ಎಂಬ ಮನದ ಸದಾಶಯದೊಂದಿಗೆ ಮಗದೊಂದು ಬರಹಕ್ಕೆ ಪ್ರೇರಣೆಯ ಮುನ್ನುಡಿ ಬರೆಯುತ್ತಾ ಮೊದಲ ಪ್ರಬಂಧ ಬರಹದ ಕೊನೆ ಪುಟಕ್ಕೆ ಪೂರ್ಣವಿರಾಮ ಹಾಕುತ್ತಿದ್ದೇನೆ.

**ಪರಾಮರ್ಶನ ಗ್ರಂಥಗಳು:**

1. ಶಿವರಾಮ ಕಾರಂತ ಕೆ., (1957), ಯಕ್ಷಗಾನ ಬಯಲಾಟ, ಪುತ್ತೂರು: ಹರ್ಷ ಪ್ರಕಾಶನ.
2. ಗಿರೀಶ್ ಕಾರ್ನಾಡ್, (2005), ರಂಗದ ಅನುಭವ, ಬೆಂಗಳೂರು: ಅಂಕಿತ ಪುಸ್ತಕ.
3. ಶಿವರಾಮ ಕಾರಂತ ಕೆ., (1975), ಯಕ್ಷ ರಂಗಕ್ಕಾಗಿ, ಬೆಂಗಳೂರು: ಶ್ರೀಮಾತಾ ಪ್ರಕಾಶನ.
4. ಶ್ರೀ ಭುಜಂಗ (ಬೋಳಾರ ಮಾರಿಗುಡಿ ದೇವಸ್ಥಾನದ ಹಿರಿಯರು), (2026), ನೇರ ಸಂದರ್ಶನ, ಮಂಗಳೂರು. ಸಂದರ್ಶನ ದಿನಾಂಕ: 08–08–2026.